SRI DEVARAJ URS ACADEMY OF HIGHER EDUCATION & RESEARCH
SRI DEVARAJ URS MEDICAL COLLEGE
Tamaka, Kolar
SDUAHER
UNIVERSITY LIBRARY & LEARNING RESOURCE CENTRE

Online Newspaper Clipping Service

THE TIMES OF INDIA

Dtd-Wednesday, 11th, October– 2017

Pg.No.11

# Pharma cos must include Indian patients in trials to sell drug here

## Free Access For Those With Critical Disease

Sushmi.Dey@timesgroup.com



**The drug regulator said, now there are adequate checks and balances in place and opening up of global trials will ensure access to new medicines for Indian patients**

**New Delhi:** In a move to ensure efficacy of medicines sold in India, the drug regulator has made it mandatory for companies to include Indian patients in global clinical trials if they want to market in India a new drug developed outside the country. The move assumes significance as it will mean a lot of Indian patients suffering from critical diseases will have free access to medicines which are yet to be launched in the country.

The decision was taken in a recent technical committee meeting, headed by director general of health services Jagdish Prasad. The committee, which was formed following directions from the Supreme Court, has a mandate to supervise clinical trials on new chemical entities.

"Any firm intending to market a new drug which is being developed outside the country, should include Indian patients in the global clinical trial....," the minutes of the meeting, reviewed by TOI, said. The committee also decided that if proposal of such global clinical trials are already approved in ICH countries such as the US, Europe and Japan, then it will be reviewed on priority by the Indian drug regulator.

The ICH or International Council for Harmonisation of Technical Requirements for Pharmaceuticals for Human Use is a project that brings together the regulatory authorities of Europe, Japan and the United States and experts from the pharmaceutical industry in the three regions to discuss scientific and technical aspects of pharmaceutical product registration. Clinical trial proposals approved by an ICH country will also be considered for approval by the Drugs Controller General of India (DCGI) without referring to subject expert committee, unless there is some specific reasons which should be recorded in writing.

"The decision has been taken in public interest keeping in mind the safety of Indian patients. It is important that drugs which are sold in the country are being tested on Indian subjects prior to their launch," DCGI G N Singh said.

The move is also expected to benefit the clinical research organisations and hospitals operating in India. These organisations along with various hospitals conduct clinical trials or testing of drugs on human beings on behalf of pharmaceutical companies, mainly multinational drug makers. The clinical trial industry had suffered huge losses in India after certain unethical practices by a few organisations and hospitals came to light in 2011. This was followed by stringent regulatory norms and directions by the apex court itself for strict monitoring of trials.

ವಿಜಯ ಕರ್ನಾಟಕ



# ರ್ಯಾಗಿಂಗ್ ನಿವಾರಣೆ: ಸಾಮೂಹಿಕ ಹೊಣೆ

ದೇಶದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯೆಂದೆನಿಸಿರುವ ಐಐಟಿ ಕಾನ್ಪುರದಲ್ಲಿ ಕಿರಿಯ ವಿದ್ಯಾರ್ಥಿಗಳ ಮೇಲೆ ರ್ಯಾಗಿಂಗ್ ನಡೆಸಿದ್ದಕ್ಕಾಗಿ 26 ವಿದ್ಯಾರ್ಥಿಗಳನ್ನು ಮೂರು ವರ್ಷಗಳ ಕಾಲ ಅಮಾನತುಗೊಳಿಸಲಾಗಿದೆ; ಆರು ವಿದ್ಯಾರ್ಥಿಗಳಿಗೆ ಒಂದು ವರ್ಷ ಕಾಲ ಕಾಲೇಜು ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಇವರು, ಕೆಲ ಕಿರಿಯ ವಿದ್ಯಾರ್ಥಿಗಳನ್ನು ಬೆತ್ತಲೆ ಗೊಳಿಸಿ, ವಿಕೃತಾನಂದ ಅನುಭವಿಸಿದ್ದ ದೃಶ್ಯಗಳನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದರು. ನಿಜಕ್ಕೂ ಇದೊಂದು ಆತಂಕಕಾರಿ ಬೆಳವಣಿಗೆ. ರ್ಯಾಗಿಂಗ್ ನಿರ್ಬಂಧಿಸಲು ಕಠಿಣ ಕಾನೂನುಗಳಿದ್ದರೂ ಪದೇಪದೆ ನಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ಇಂಥ ಪ್ರಕರಣಗಳು ವರದಿಯಾಗುತ್ತಲೇ ಇವೆ. ಉನ್ನತ ಶಿಕ್ಷಣದ ಕನಸು ಹೊತ್ತು ಕಾಲೇಜಿಗೆ ಅಡಿ ಇಡುವ ಯುವಕ ಯುವತಿಯರಿಗೆ ಮಾರ್ಗ ದರ್ಶನ ನೀಡಬೇಕಾದ ಹಿರಿಯ ವಿದ್ಯಾರ್ಥಿಗಳು, ಕಿರಿಯರನ್ನು ಆಟದ ವಸ್ತುಗಳಾಗಿ ಮಾಡಿಕೊಳ್ಳುವುದು, ಅವರನ್ನು ಪೀಡಿಸಿ, ಅವಮಾನಕ್ಕೊಳಪಡಿಸುವುದು ಶಿಕ್ಷಣದ ಅಣಕವಲ್ಲದೆ ಬೇರೇನೂ ಅಲ್ಲ. ಇಂಥ ಮನೋಸ್ಥಿತಿ ಇರುವವರು ಸಮಾಜಕ್ಕೆ ಯಾವುದೇ ರೀತಿಯಲ್ಲೂ ಉಪಯುಕ್ತವಾಗಿರಲು ಸಾಧ್ಯವಿಲ್ಲ. ಇನ್ನೊಬ್ಬರ ಮೇಲೆ ದರ್ಪ ಮಾಡುವುದು, ಅಧಿಕಾರ ಚಲಾಯಿಸುವುದು, ಅವರಿಂದ ವಿಧೇಯತೆಯನ್ನು ಬಯಸುವುದನ್ನು 'ಹಿರಿತನ' ಎನ್ನಲಾಗದು. ಇದೊಂದು ಮನೋಜಾಡ್ಯ. ಇನ್ನೊಬ್ಬರನ್ನು ಪೀಡಿಸಿ ಅದರಿಂದ ಆನಂದ ಪಡೆಯುವವರು ಆ ಕ್ಷಣಕ್ಕಷ್ಟೇ ತೃಪ್ತಿ ಪಟ್ಟುಕೊಂಡು ಸುಮ್ಮನಾಗುವುದಿಲ್ಲ, ದುರ್ಬಲ ವ್ಯವಸ್ಥೆಗಳಿರುವ ಕಡೆಗಳಲ್ಲೆಲ್ಲ ತಮ್ಮ ಆತ್ಮರತಿ ಮತ್ತು ಅಹಂಅನ್ನು ಪ್ರದರ್ಶಿಸುತ್ತಲೇ ಇರುತ್ತಾರೆ. ಇವರಿಂದ ದೌರ್ಜನ್ಯಕ್ಕೀಡಾದವರು ಮಾನಸಿಕವಾಗಿ ಕುಗ್ಗಿ ಎಷ್ಟೋ ಮಂದಿ ಶಿಕ್ಷಣಕ್ಕೆ ತಿಲಾಂಜಲಿ ನೀಡಬಹುದು. ಅವಮಾನದಿಂದ ಕುಗ್ಗಿ ಜೀವವನ್ನೇ ಕೊನೆಗಾಣಿಸಿಕೊಳ್ಳಬಹುದು. ಇಂಥ ಪ್ರಕರಣಗಳು ಪದೇ ಪದೆ ಘಟಿಸಿದ ಕಾರಣಕ್ಕೆ ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯುಜಿಸಿ) 2009ರಲ್ಲೇ ರ್ಯಾಗಿಂಗ್ ವಿರೋಧಿ ಸಹಾಯ ವಾಣಿಯನ್ನು ಆರಂಭಿಸಿತ್ತು. ಇದಲ್ಲದೆ ಕ್ಯಾಂಪಸ್‌ಗಳಲ್ಲಿ ವಿದ್ಯಾರ್ಥಿಗಳನ್ನು ಪೀಡಿಸುವವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡುವ ಅವಕಾಶ ಕೂಡ ಇದೆ. ಆದರೆ ಈ ಕ್ರಮಗಳು ಸಾಕಷ್ಟು ಯಶಸ್ವಿಯಾಗಿಲ್ಲ. ಯುಜಿಸಿ ಪ್ರಾಯೋಜಿತ ಅಧ್ಯಯನವೊಂದರ ಪ್ರಕಾರ ಈಗಲೂ ಶೇ 40ರಷ್ಟು ವಿದ್ಯಾರ್ಥಿಗಳು ರ್ಯಾಗಿಂಗ್‌ಗೆ ಗುರಿಯಾಗುತ್ತಿದ್ದಾರೆ. ಆದರೆ ಶೇ 8.6ರಷ್ಟು ವಿದ್ಯಾರ್ಥಿಗಳು ಮಾತ್ರ ದೂರು ನೀಡುತ್ತಿದ್ದಾರೆ. ಮುಕ್ತ ಕಲಿಕೆಯ ವಾತಾವರಣವಿರಬೇಕಾದ ವಿದ್ಯಾಲಯಗಳಲ್ಲಿ ಭಯ, ಆತಂಕ ಮನೆ ಮಾಡಿರುವುದು ದೊಡ್ಡ ವಿಪರ್ಯಾಸ.



ಐಐಟಿ- ಕಾನ್ಪುರದ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಹಿರಿಯ ವಿದ್ಯಾರ್ಥಿಗಳನ್ನು ಕಾಲೇಜಿನಿಂದ ಹೊರಗೆ ಹಾಕುವ ನಿರ್ಣಯ ಕೈಗೊಳ್ಳಲಾಗಿದೆ. ಇಂಥ ದಿಟ್ಟ ನಿರ್ಧಾರಗಳಿಂದ ಮಾತ್ರ ಈ ಪಿಡುಗನ್ನು ನಿಯಂತ್ರಿಸಲು ಸಾಧ್ಯ. ಅಮಾನತುಗೊಂಡ ವಿದ್ಯಾರ್ಥಿಗಳ ಜೀವನ ಹಾಳಾಗುತ್ತದೆ ನಿಜ. ಆದರೆ ಉಪ್ಪು ತಿಂದವರು ನೀರು ಕುಡಿಯಲೇಬೇಕು. ಒಂದು ಅನಪೇಕ್ಷಿತ ಕ್ರಿಯೆ ನಡೆದಾಗ ಅದರಿಂದ ಆಗುವ ಸರಣಿ ಪರಿಣಾಮಗಳನ್ನು ಅವರು ಎದುರಿಸಲೇಬೇಕಾಗುತ್ತದೆ. ಇದಕ್ಕೆ ಬದಲಿ ದಾರಿಗಳೇ ಇಲ್ಲ. ಪ್ರಜ್ಞಾವಂತ ಹಾಗೂ ಹೊಣೆ ಅರಿತ ವಿದ್ಯಾರ್ಥಿ ಸಮೂಹವನ್ನು ರೂಪಿಸುವುದು ಶಿಕ್ಷಣ ಸಂಸ್ಥೆಗಳು ಮತ್ತು ಸರಕಾರಕ್ಕೆ ಮಾತ್ರ ಸಂಬಂಧಿಸಿದ ಸಂಗತಿಯಲ್ಲ, ಇದರಲ್ಲಿ ಕುಟುಂಬ ಮತ್ತು ಸಮಾಜದ ಹೊಣೆಗಾರಿಕೆ ಕೂಡ ಇರುತ್ತದೆ. ಮಕ್ಕಳನ್ನು ಎಲ್ಲರಿಂದ ಪ್ರತ್ಯೇಕಿಸಿ ಯಶಸ್ಸಿನ ವಿಶಿಷ್ಟ ರೂಪಗಳನ್ನಾಗಿಸುವುದಕ್ಕಿಂತ ಅವರು ಸಮಾಜದ ಜತೆ ಒಡನಾಡುವುದನ್ನು ಕಲಿಸಬೇಕು. ಎಲ್ಲರ ಜತೆ ಮುಕ್ತವಾಗಿ ಅವರು ಬೆರೆಯುವುದರಿಂದ ಉತ್ತಮ ನಡವಳಿಕೆಗಳನ್ನು ರೂಪಿಸಿಕೊಳ್ಳಲು ಸಹಾಯವಾಗುತ್ತದೆ. ಇದಲ್ಲದೆ ಮೇಲರಿಮೆ- ಕೀಳರಿಮೆ, ದರ್ಪ- ಶರಣಾಗತಿಯನ್ನು ಪೋಷಿಸುವ ಹಿರಿಯ ಮತ್ತು ಕಿರಿಯ ಎನ್ನುವ ಅಧಿಕಾರದ ಭಾವನೆಗಳನ್ನು ಅಳಿಸಿ, ಮಾನವೀಯ ಮೌಲ್ಯಗಳನ್ನು ಬೆಳೆಸಬೇಕು. ಆಗ ಮಾತ್ರ ರ್ಯಾಗಿಂಗ್‌ನಂಥ ಪಿಡುಗನ್ನು ನಿರ್ಮೂಲನೆ ಮಾಡಲು ಸಾಧ್ಯವಾಗುತ್ತದೆ.

AHER